# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 359 |
| ಉತ್ತರಿಸಬೇಕಾದ ದಿನಾಂಕ | : | 13.08.2025 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಕಳೆದ 2 ವರ್ಷಗಳಲ್ಲಿ ವಿವಿಧ ಯೋಜನೆಗಳನ್ವಯ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ; (ಯೋಜನಾವಾರು ವಿವರ ನೀಡುವುದು) | 2023-24 ಹಾಗೂ 2024-25ನೇ ಸಾಲಿನ ಆಯವ್ಯಯದಲ್ಲಿ ರಾಜ್ಯವಸತಿ ಯೋಜನೆಗಳಡಿ ಹೊಸ ಮನೆಗಳ ಗುರಿ ನಿಗಧಿಪಡಿಸಿರುವುದಿಲ್ಲ. ವಿವಿಧ ವಸತಿ ಯೋಜನೆಯಡಿ ಕಾಮಗಾರಿ ಆದೇಶ ನೀಡಿ 1 ರಿಂದ 2 ವರ್ಷ ಕಾಲಾವಕಾಶ ನೀಡಿದ ನಂತರವೂ ಪ್ರಾರಂಭವಾಗದ ಮನೆಗಳನ್ನು ರದ್ದುಪಡಿಸಿ ಕೆಲವೊಂದು ವಿಧಾನಸಭಾ ಕ್ಷೇತ್ರ/ಗ್ರಾಮ ಪಂಚಾಯ್ತಿಗಳಿಗೆ ಮರು ಹಂಚಿಕೆ ಮಾಡಲಾಗಿರುತ್ತದೆ.<br><br>ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಅವಾಸ್ ಯೋಜನೆ(ಗ್ರಾಮೀಣ)ಯಡಿ 2024-25ನೇ ಸಾಲಿನಲ್ಲಿ ರಾಜ್ಯಕ್ಕೆ 7,02,731 ಮನೆಗಳ ಗುರಿಯನ್ನು ನೀಡಲಾಗಿರುತ್ತದೆ.<br><br>2024ನೇ ಸಾಲಿನ ಮಳೆ/ಅತಿವೃಷ್ಟಿಯಿಂದ ಸಂಪೂರ್ಣ ಹಾನಿಗೊಳಗಾದ ಮನೆಗಳಿಗೆ ದೇವರಾಜು ಅರಸು ವಸತಿ ಯೋಜನೆಯಡಿ ಪರಿಹಾರ ಧನ ಪಾವತಿಸಲು ಕ್ರಮವಹಿಸಲಾಗುತ್ತದೆ.<br><br>ನಗರ ಪ್ರದೇಶದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ PMAY(U)- Non Convergence ರಡಿಯಲ್ಲಿ 2023-24ನೇ ಸಾಲಿಗೆ ಮಂಜೂರು ಮಾಡಲಾಗಿರುತ್ತದೆ.<br><br>ಹೀಗೆ ಹಂಚಿಕೆ ಮಾಡಲಾದ ಮನೆಗಳ ಗುರಿಯಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗೆ ಹಂಚಿಕೆ ಮಾಡಲಾದ ಮನೆಗಳ ಗುರಿಯ ಯೋಜನವಾರು ವಿವರ ಈ ಕೆಳಗಿನಂತಿದೆ: |

**ಕಲಬುರಗಿ ಜಿಲ್ಲೆ:**

| ಯೋಜನೆ | ಹಂಚಿಕೆ ಮಾಡಲಾದ ಗುರಿ |
|---|---|
| ಬಸವ ವಸತಿ | 2573 |
| ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ (ಗ್ರಾಮೀಣ) | 800 |
| ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) | 58372 |
| ದೇವರಾಜು ಅರಸು ವಸತಿ (ಗ್ರಾಮೀಣ)-Flood | 1 |
| **ಒಟ್ಟು** | **61746** |

**ಯಾದಗಿರಿ ಜಿಲ್ಲೆ:**

| ಯೋಜನೆ | ಹಂಚಿಕೆ ಮಾಡಲಾದ ಗುರಿ |
|---|---|
| ಬಸವ ವಸತಿ | 1384 |
| ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ (ಗ್ರಾಮೀಣ) | 1231 |
| ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) | 30811 |
| ಪ್ರಧಾನ ಮಂತ್ರಿ ಆವಾಸ್ (ನಗರ)- Non Convergence | 68 |
| **ಒಟ್ಟು** | **33494** |

<table>
<tr>
<td>ಆ)</td>
<td>ಕಳೆದ 2 ವರ್ಷಗಳಲ್ಲಿ ಸದರಿ ಜಿಲ್ಲೆಗಳಲ್ಲಿ ಎಷ್ಟು ಮನೆಗಳನ್ನು ಕಟ್ಟಲು ಪ್ರಾರಂಭಿಸಲಾಗಿದೆ; (ವಿವರ ನೀಡುವುದು)</td>
<td>ಕಲಬುರಗಿ ಜಿಲ್ಲೆ:<br><br>ಹಂಚಿಕೆ ಮಾಡಲಾದ 61,746 ಮನೆಗಳ ಗುರಿಯಲ್ಲಿ 30,427 ಮನೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಈ ಮನೆಗಳ ಪೈಕಿ 409 ಮನೆಗಳು ಪೂರ್ಣಗೊಂಡಿರುತ್ತವೆ. 2,609 ಮನೆಗಳು ಪ್ರಗತಿಯಲ್ಲಿರುತ್ತವೆ. 27,396 ಮನೆಗಳು ಪ್ರಾರಂಭವಾಗಬೇಕಾಗಿದ್ದು, ಇನ್ನೂಳಿದ 13 ಮನೆಗಳು ವಿವಿಧ ಕಾರಣಗಳಿಂದ ತಾತ್ಕಲಿಕವಾಗಿ ತಡೆಹಿಡಿಯಲಾಗಿರುತ್ತದೆ.<br><br>ಯಾದಗಿರಿ ಜಿಲ್ಲೆ:<br><br>ಹಂಚಿಕೆ ಮಾಡಲಾದ 33,494 ಮನೆಗಳ ಗುರಿಯಲ್ಲಿ 17,159 ಮನೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಈ ಮನೆಗಳ ಪೈಕಿ 857 ಮನೆಗಳು ಪೂರ್ಣಗೊಂಡಿರುತ್ತವೆ. 2,548 ಮನೆಗಳು ಪ್ರಗತಿಯಲ್ಲಿರುತ್ತವೆ. 13,662 ಮನೆಗಳು ಪ್ರಾರಂಭವಾಗಬೇಕಾಗಿದ್ದು, ಇನ್ನೂಳಿದ 92 ಮನೆಗಳು ವಿವಿಧ ಕಾರಣಗಳಿಂದ ತಾತ್ಕಲಿಕವಾಗಿ ತಡೆಹಿಡಿಯಲಾಗಿರುತ್ತದೆ.</td>
</tr>
<tr>
<td>ಇ)</td>
<td>ಈ ಜಿಲ್ಲೆಗಳಿಗೆ ಕಳೆದ 2 ವರ್ಷಗಳಲ್ಲಿ ವಸತಿ ಯೋಜನೆಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಎಷ್ಟು ಸರ್ಕಾರ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ? (ವಿವರ ಒದಗಿಸುವುದು)</td>
<td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಕಳೆದ 2 ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳಿಗೆ ಪ್ರಗತಿ ಆಧಾರದ ಜುಲೈ-2025ರ ಅಂತ್ಯಕ್ಕೆ ಕಲಬುರಗಿ ಜಿಲ್ಲೆಗೆ ರೂ.69.17ಕೋಟಿಗಳು ಹಾಗೂ ಯಾದಗಿರಿ ಜಿಲ್ಲೆಗೆ ರೂ.66.41ಕೋಟಿಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ. ವಿವರ ಈ ಕೆಳಗಿನಂತಿವೆ.<br><br>ಕಲಬುರಗಿ ಜಿಲ್ಲೆ (ರೂ. ಕೋಟಿಗಳಲ್ಲಿ)
<table>
<tr><th>ಯೋಜನ</th><th></th></tr>
<tr><td>ಬಸವ ವಸತಿ</td><td>0.85</td></tr>
<tr><td>ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್</td><td>1.01</td></tr>
<tr><td>ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ)</td><td>66.89</td></tr>
<tr><td>ದೇವರಾಜು ಅರಸು ವಸತಿ</td><td>0.42</td></tr>
<tr><td>ಒಟ್ಟು</td><td>69.17</td></tr>
</table>
<br>ಯಾದಗಿರಿ ಜಿಲ್ಲೆ (ರೂ. ಕೋಟಿಗಳಲ್ಲಿ)
<table>
<tr><th>ಯೋಜನ</th><th></th></tr>
<tr><td>ಬಸವ ವಸತಿ</td><td>11.67</td></tr>
<tr><td>ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್</td><td>11.40</td></tr>
<tr><td>ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ)</td><td>43.19</td></tr>
<tr><td>ದೇವರಾಜು ಅರಸು ವಸತಿ</td><td>0.15</td></tr>
<tr><td>ಒಟ್ಟು</td><td>66.41</td></tr>
</table>
</td>
</tr>
</table>

ಸಂಖ್ಯೆ: ವಇ 315 ಹೆಚ್‌ಎಂ 2025

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು